ನೋಟಿಫಿಕೇಷನ್.

ತಾರೀಖು 31ನೇ ಜನವರಿ 1890.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ರ 1878ನೇ ಇಸವಿ ಜುಲೈ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಇರುವ ಸ್ಟೇಟ್ ಫಾರೆಸ್ಟ್‌ಗಳು ಮತ್ತು ಪ್ಲಾಂಟೇಷನ್‌ಗಳು 1890ನೇ ಇಸವಿ ಜನವರಿ 31ನೇ ತಾರೀಖು ಲಾಗಾಯತು ಮೇ ಆಖೈರ್ ವರಿಗಿನ ಬಿಸಲು ಕಾಲದಲ್ಲಿ ಪರಭಾರೆ ಜನಗಳಿಗೆ ಬಂದು ಮಾಡಲ್ಪಟ್ಟಿರುತ್ತದೆ.

ಅತಿಕ್ರಮಪ್ರವೇಶ ಮಾಡುವರು ಪ್ರಾಸಿಕ್ಯೂಷನ್‌ಗೆ ಒಳಪಡಬೇಕಾಗುವದು.

ನಂ.	ಸ್ಟೇಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.	ತಾಲ್ಲೂಕು.
1	ಕೊಕರಗುಡ್ಡ ಸ್ಟೇಟ್ ಫಾರೆಸ್ಟ್	ಶಿವಮೊಗ್ಗ ತೀರ್ಥಹಳ್ಳಿ ಕುಂಸಿ
2	ಸಕ್ರೆಬೈಲ್ ಡಿಟೋ	ಶಿವಮೊಗ್ಗ ತೀರ್ಥಹಳ್ಳಿ
3	ಕುಕ್ಕವಾಡ ವುಬ್ರಾಣಿ ಡಿಟೋ	ಶಿವಮೊಗ್ಗ ಜನ್ನಗಿರಿ ತರೀಕೆರೆ
4	ಮಲೆಬೆನ್ನೂರು ಡಿಟೋ	ಹೊನ್ನಾಳಿ ದಾವಣಗೆರೆ
5	ಬಸವನಂದಿಹಳ್ಳಿ ಡಿಟೋ	ಶಿಕಾರಿಪುರ
6	ಕೆಂಗರಸಿ ಡಿಟೋ	ಶಿಕಾರಿಪುರ
7	ಕವಳೇ ಡಿಟೋ	ಶಿಕಾರಿಪುರ
8	ತೆಲಗಡ್ಡಿ ಡಿಟೋ	ಸೊರಬ
9	ಅರತೆಲಗಡ್ಡಿ ಡಿಟೋ	ಸೊರಬ
10	ಆಲಕೊಳ್ಳ ಸಂದಲ್ ಪ್ಲಾಂಟೇಷನ್	ಶಿವಮೊಗ್ಗ
11	ಅನಪಿನಕಟ್ಟೆ ಸಾಗವಾನಿ ಮತ್ತು ಸಂದಲ್ ಪ್ಲಾಂಟೇಷನ್	ಶಿವಮೊಗ್ಗ
12	ಸಕ್ರೆಬೈಲ್ ಸಾಗವಾನಿ ಪ್ಲಾಂಟೇಷನ್	ಶಿವಮೊಗ್ಗ
13	ಸಿದ್ದಿಹಳ್ಳಿ ಸಾಗವಾನಿ ಪ್ಲಾಂಟೇಷನ್	ಸೊರಬ
14	ಕಾಳೇನಹಳ್ಳಿ ಡಿಟೋ	ಶಿಕಾರಿಪುರ

ಇ. ಪಿ. ಲೌರಿ, ಆಫೀ ಕ್ವಿ ಸರ್ವೇಯರ್.

ಗವರ್ನಮೆಂಟ್ ತಯಾರೀ ಬಾಟಲು ಸಿಂಕೋನಾ ಫೆಬ್ರಿಫ್ಯೂಜ್ ಎಂ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತಗದುಕೊಳ್ಳುವಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಅದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಒಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ, ಈ ಔಷಧವು ಕಲ್‌ಕತ್ತೆಯಲಿ ಮುಖ್ಯ ಮುಖ್ಯ ಯೂರೋಪಿಯರ್ಸ ವ ನೇಟೀವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲು, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Govt. Central Press, Bangalore.—1890.